ಇಂದು ದಿನಾಂಕಃ 26.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಪ್ರತಿವಾದಿಗಳ ಪರ ಶ್ರೀ ಎಮ್.ಬಿ.ಪಿ. ವಕೀಲರಿಂದಃ

ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಎರಡು ಕರ ನಿರ್ಧರಣಾ ಪಟ್ಟಿಗಳ ದೃಢೀಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಡಿ-2 ಮತ್ತು 3 ಎಂದು, ವಾಟ್ನಿ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಡಿ-4 ಎಂದು, ದಿನಾಂಕಃ 06.02.2021 ರ ದೃಢೀಕೃತ ಠರಾವು ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಡಿ-5 ಎಂದು ಮತ್ತು ಎರಡು ಛಾಯಾಚಿತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಸಿ.ಡಿ.ಯನ್ನು ಹಾಜರು ಮಾಡಿದ್ದು ಅವುಗಳನ್ನು ನಿಡಿ-6 ರಿಂದ 8 ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಹಕ್ಕುಬಿಟ್ಟ ಪತ್ರವನ್ನು ನಿಶಾನೆಗೊಳಿಸಲು ಹಾಜರು ಮಾಡಿದ್ದು ಮೇಲ್ನೋಟಕ್ಕೆ ಸದರಿ ಹಕ್ಕುಬಿಟ್ಟ ಪತ್ರವನ್ನು ಕಡಿಮೆ ಮುದ್ರಾಂಕ ಶುಲ್ಕದ ದಾಖಲೆಯ ಮೇಲೆ ಬರೆದಿರುವುದು ಕಂಡು ಬಂದಿರುವುದರಿಂದ ಅದನ್ನು ಕರ್ನಾಟಕ ಮುದ್ರಾಂಕ ಶುಲ್ಕ ಕಾಯ್ದೆ ಅಡಿಯಲ್ಲಿ ಇಂಪೌಂಡ ಮಾಡಿಕೊಳ್ಳಲಾಯಿತು ಮತ್ತು ಸದರಿ ದಾಖಲೆಯನ್ನು ವಾದಿಯ ಪರ ವಕೀಲರು ನಿಶಾನೆಗೊಳಿಸಲು ತಕರಾರು ಮಾಡಿರುತ್ತಾರೆ.

ಆದ್ದರಿಂದ ಸದರಿ ಹಕ್ಕುಬಿಟ್ಟ ಪತ್ರದ ಮೇಲೆ ಸರಿಯಾದ ಮುದ್ರಾಂಕ ಶುಲ್ಕ ಮತ್ತು ಪೆನಾಲ್ಟಿಯನ್ನು ನೀಡುವ ಆಲಿಕೆಗಾಗಿ ಮುಂದೂಡಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶ ಕೋರಿದ್ದು ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.